ಚಿತ್ರಗಳಲ್ಲಿ ಅಳವಟ್ಟಿರುವ ಕಾರಣದಿಂದ ಇವು 'ಕಾವ್ಯ'ಅನ್ನಿಸಿಕೊಳ್ಳುವುದಿಲ್ಲವೇ? ಇವು ಚೆನ್ನಾಗಿದ್ದರೆ, ಕಲಾತ್ಮಕ ಆಗಿದ್ದರೆ... 'ಕಾವ್ಯ' ಎಂದು ಏಕೆ ಕರೆಯಬಾರದು? ವಿಮರ್ಶಕರೇ ವಿಶಾಲವಾಗಿ ನೋಡಿ! ವಿಮರ್ಶೆ ಮಾಡಿ! ಮೌಲ್ಯಮಾಪನದಲ್ಲಿ ಭೇದ ಭಾವ ಏಕೆ?

ಪ್ರತಿ ಹಾಡೂ ಒಂದು ಅತ್ಯುತ್ತಮ ಕಾವ್ಯ (ಕವಿತೆ) ಆಗಿರಲಿಕ್ಕೆ ಸಾಕು. ಅದು ಟ್ಯೂನಿಗೆ ಬರೆದದ್ದಾಗಿರಲಿ ಅಥವಾ ಟ್ಯೂನ್ ಮಾಡುವ ಮೊದಲು ಬರೆದ ಕವಿತೆಯಾಗಿರಲಿ, ಅದೆಲ್ಲಾ ಮುಖ್ಯವಾಗುವುದಿಲ್ಲ. ಮುಖ್ಯವಾಗುವುದಿಷ್ಟೆ: ಅದು ಎಷ್ಟರ ಮಟ್ಟಿಗೆ ಒಳ್ಳೆಯ ಕವಿತೆ ಆಗಿದೆ ಎಂಬುದು ಮುಖ್ಯ.

ಈಗ ನೋಡಿ. ನಾನು ಟ್ಯೂನ್‌ಗೇ ಬರೆದ 'ನಿನ್ನ ರೂಪು ಎದೆಯ ಕಲಕಿ ಕಣ್ಣು ಮಿಂದಾಗ' ಗೀತೆಯನ್ನು ಸಾಹಿತ್ಯದ ನೂರಾರು ರಸಿಕರು ಮಚ್ಚುಗೆ ವ್ಯಕ್ತಪಡಿಸಿದ್ದಾರೆ. ಪತ್ರಗಳನ್ನೂ ಲೇಖನಗಳನ್ನೂ ಬರೆದಿದ್ದಾರೆ. ಪ್ರಶಂಸಿಸಿದ್ದಾರೆ. ನಾನು ಆ ಗೀತೆಯನ್ನು ರೂಪಕಗಳ ಮೂಲಕ ಕಂಡರಿಸಿದ್ದೇನೆ.

ಸಾಹಿತಿಗೆ ಸಂಸ್ಕಾರ ಇದ್ದರೆ, ಜೀವನಾನುಭವ ಚೆನ್ನಾಗಿ ಇದ್ದರೆ, ಸಾಹಿತ್ಯದ ಅಧ್ಯಯನ ನಿರಂತರವಾಗಿದ್ದರೆ, ಅಭಿರುಚಿಯೂ ಉತ್ಕೃಷ್ಟವಾಗಿದ್ದರೆ, ಗೀತ ಗುಣಮಟ್ಟದ ಉತ್ತಮಿಕೆಯಿಂದ ವಾಗರ್ಥದಿಂದ ಪರಿಪೂರ್ಣವಾದ ಗೀತೆ ಕಾವ್ಯವೂ ಆಗಿ ಸಹೃದಯರ ಮೆಚ್ಚುಗೆಗೆ ಪಾತ್ರವಾಗುತ್ತದೆ.

ಟ್ಯೂನ್‌ಗೆ ಬರೆದ 'ಶುಭವಾಗುತ್ತೈತಮ್ಮೋ' (ಚಿತ್ರ: ಜನಮದ ಜೋಡಿ, ಸಂಗೀತ: ವಿ. ಮನೋಹರ್, ನಿರ್ದೇಶನ: ಟಿ.ಎಸ್. ನಾಗಾಭರಣ). ಕನ್ನಡ ಚಿತ್ರ ರಂಗದಲ್ಲೇ ಅತ್ಯಂತ ಹೆಚ್ಚಿನ ಲಾಭಾಂಶ ಗಳಿಸಿ ದಾಖಲೆ ಸ್ಥಾಪಿಸಿದೆ.

ನಾನು 'ಆಲೆಮನೆ' ಚಿತ್ರಕ್ಕೆ ಒಂದು ತಾತ್ವಿಕ ಗೀತೆಯನ್ನು ಬರೆಯಬೇಕಾಗಿ ಬಂತು. ಸಂಗೀತ ನಿರ್ದೇಶಕರಾದ ಸಿ. ಅಶ್ವತ್ಥ್ ಅವರು ಮೊದಲು 'ಕವಿತೆ' ಬರೆದುಕೊಡಿ. ಆನಂತರ ನಾನು ಟ್ಯೂನ್ ಮಾಡುತ್ತೇನೆ ಎಂದರು.

ಆಗಬರೆದದ್ದು–

ಎಲ್ಲ ಮೇಲು ಕೀಳು/ ಸುಳ್ಳು ಬೇಧ ಭಾವ–ಬಗೆದಾ/ಮನುಜ ಕಾಣೋ....
ಬಿಡು ರಾಗ ದ್ವೇಷ/ ಸುಡು ಕಾಮ ಕ್ರೋಧ/ ಮಿತಿಯಾ ಅರಿತು ಬಾಳೋ...

ಈ ಹೊತ್ತಿಗೂ ಈ ಗೀತೆ ಭಾರತದ ಪ್ರಸ್ತುತ ಸ್ಥಿತಿಗೂ ಅನ್ವಯಿಸುತ್ತದೆ. ಇದೊಂದು ಭಾವೈಕ್ಯ



'ಪರಸಂಗದ ಗೆಂಡೆತಿಮ್ಮ' ಚಿತ್ರದ ದೊರಂಗೌ ಅವರ ಗೀತೆಗಳು ಸಾಹಿತ್ಯದ ಗುಣದಿಂದ ಸಹೃದಯರ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿವೆ